ಉಷಾ ಸೋಗಾಲ್, ತುರಹಳ್ಳಿ

*ಇಲ್ಲೊಬ್ಬ ವಿದ್ಯಾರ್ಥಿ ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸಿ ಕೊನೆಯಲ್ಲಿ ಆಲ್ ದ ಬೆಸ್ಟ್ ಮೇಡಮ್ ಎಂದು ಬರೆದಿದ್ದಾನಲ್ಲಾ, ಏಕೆ?*




ಮುನ್ನೆಚ್ಚರಿಕೆ ನೀಡಿದ್ದಾನಷ್ಟೆ. ಈವರೆಗೆ ಅವನ ಉತ್ತರಗಳನ್ನು ಓದಿದವರಿಗೆ ನಕ್ಕು ನಕ್ಕು ಹೊಟ್ಟೆ ಹುಣ್ಣಾಗಿದೆಯಂತೆ.

ಎ.ವಿನೋದ್ ಖಾಟೋಕರ್, ಬೆಂಗಳೂರು

*ಮನುಷ್ಯನಿಗೆ ಮುಂದೆ ಎರಡು ಕಣ್ಣುಗಳಿವೆ. ಒಂದು ವೇಳೆ ಹಿಂದೆಯೂ ಎರಡು ಕಣ್ಣುಗಳಿದ್ದಿದ್ದರೆ ಏನಾಗುತ್ತಿತ್ತು ರಾಂಜಿ?*

ಕಾಪಿ ಹೊಡೆಯುವ ವಿದ್ಯಾರ್ಥಿಗಳು ಫ್ರಂಟ್ ಬೆಂಚ್ ಸಿಕ್ಕರೂ ಗಾಬರಿಯಾಗದೆ ಹಿಂದಿನವರದರಿಂದ ಕಾಪಿ ಹೊಡೆಯಬಹುದಾಗಿತ್ತು.


ರವೀದ್ರನಾಥ ಶಿ. ಯಡಹಳ್ಳಿ, ಬೀಳಗಿ

*ದೋಣಿ ನಡೆಸುವವನಿಗೂ, ಸಂಸಾರನೌಕೆ ನಡೆಸುವವನಿಗೂ ಇರುವ ವ್ಯತ್ಯಾಸವೇನು ಶಿವಾ?*

ದೋಣಿ ನಡೆಸುವವನಿಗೆ ಹರಿವಿನ ಅರಿವಿರಬೇಕು, ಸಂಸಾರನೌಕೆ ನಡೆಸುವವನಿಗೆ ಅರಿವಿನ ಹರವಿರಬೇಕು.

ಕೇಶವ. ಎನ್. ಪೈ, ಕಾಸರಕೋಡ

*ಅಕಾಲಿಕ ಮಳೆಗೂ, ಸಕಾಲಿಕ ಮಳೆಗೂ ಏನು ಅಂತರ?*



ನಮ್ಮ ಕ್ರಿಕೆಟ್ ತಂಡ ಗೆಲ್ಲುತ್ತಿರುವಾಗ ಮಳೆ ಬಂದರೆ ಅಕಾಲಿಕ, ಸೋಲುತ್ತಿರುವಾಗ ಬಂದರೆ ಸಕಾಲಿಕ.

ಮುರಲೀಧರ ಕುಲಕರ್ಣಿ, ಬೀದರ್

*ಸೆಕ್ಸ್ ಸ್ಕ್ಯಾಂಡಲ್‌ಗಳಲ್ಲಿ ಸಿಕ್ಕಿಹಾಕಿಕೊಂಡವರಿಗೆ ವಾತ್ಸ್ಯಾಯನ ಪ್ರಶಸ್ತಿ ನೀಡಿದರೆ ಹೇಗಿರುತ್ತೆ?*

ಊಹೂಂ. ಅಟೆಂಪ್ಟ್ ಟು ರೇಪ್‌ಗೆ ಕೀಚಕ ಪ್ರಶಸ್ತಿ, ಸೆಕ್ಸ್ ಸ್ಕ್ಯಾಂಡಲ್‌ಗೆ ಇಂದ್ರ ಪ್ರಶಸ್ತಿ ಹೆಚ್ಚು ಸೂಕ್ತ!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಸ್ಪರ್ಶಗಳಲ್ಲೆಲ್ಲ ಬಹಳ ಬೆಚ್ಚನೆಯ ಸ್ಪರ್ಶ ಯಾವುದು ಸಾರ್?*

ನೋವಿನ ಸೊಂಟಕ್ಕೆ ಹಾಟ್ ವಾಟರ್ ಬ್ಯಾಗ್ ಸ್ಪರ್ಶ.

ರವೀಂದ್ರನಾಥ. ಶಿ. ಯಡಹಳ್ಳಿ, ಬೀಳಗಿ

*ಸಾಲ ಮಾಡಿ ತುಪ್ಪ ತಿನ್ನುವುದಕ್ಕೂ, ಸಾಲ ಮಾಡಿ ಶೂಲಕ್ಕೇರುವುದಕ್ಕೂ ಇರುವ ವ್ಯತ್ಯಾಸವೇನು?*

ಒಂದರಿಂದ ಡುಮ್ಮ, ಇನ್ನೊಂದರಿಂದ ಢುಂ!

ಜಿ.ವಿಶ್ವನಾಥ್, ಗೊಂಡೇದಹಳ್ಳಿ

*ಗಂಡು ಹೆಣ್ಣಿನ ಜಾತಕ ನೋಡಿ ವಿವಾಹ ನಿಗದಿ ಮಾಡುವುದಕ್ಕಿಂತ ಅತ್ತೆ ಸೊಸೆಯರ ಜಾತಕ ನೋಡಿ ನಿಗದಿಪಡಿಸಿದರೆ ಒಳ್ಳೆಯದಲ್ಲವೆ?*

ಅಕಟಕಟಾ! ಅತ್ತೆ-ಸೊಸೆ ಒಂದಾಗಿಬಿಟ್ಟರೆ ಅವರಿಬ್ಬರೂ ಶಾಪಿಂಗ್‌ಗೆ ಔಟ್, ಮಾವ-ಮಗನಿಗೆ ಸೌಟ್!

ಗಣೇಶ. ಎಂ. ಪೈ, ಬೆಂಗಳೂರು

*ನನ್ನ ಗೆಳೆಯನ ಹೆಸರು ಉದಯ; ಅವನ ಹೆಂಡತಿಯ ಹೆಸರು ಕಸ್ತೂರಿ; ಮಕ್ಕಳಿಗೆ ಏನೆಂದು ಹೆಸರಿಡಬಹುದು?*

ಹೊಂದಿಕೊಳ್ಳುವ ಗುಣ ಇರಬೇಕಾದ ಮಗಳು ಉದಕ; ಔಷಧವೂ, ವಿಷವೂ ಆಗಬಲ್ಲ ಮಗ ದತ್ತೂರಿ!

ಬಿ.ಎ.ಅಜರುದ್ದೀನ್, ಬಾಚಹಳ್ಳಿ

*ರಾಮ್-ರಹೀಮ್, ಕೃಷ್ಣ-ಕರೀಂ, ಕುರಾನ್-ಪುರಾಣ್ ಏಕ್ ಹೀ ಹೈ ಎಂಬುದು ಎಲ್ಲರಿಗೂ ಅರ್ಥವಾದರೆ?*

ಅದು ಹಾಗಿರಲಿ. ಘರ್-ವಾಪಸಿ, ಮತಾಂತರ ಎರಡೂ ಹೇರತಕ್ಕದ್ದಲ್ಲ ಎಂದು ಅರ್ಥವಾಗಿಬಿಟ್ಟರೆ ಲೋಕಕಲ್ಯಾಣ.

ಗೌರಿ ಶೇಷಾದ್ರಿ, ಉತ್ತನಹಳ್ಳಿ

*ಪ್ರಾಣ ಹೋಗುವುದು ದೇಹದ ಯಾವ ಭಾಗದಿಂದ?*

ಅತಿ ಹೆಚ್ಚು ಸವೆದ ಭಾಗದಿಂದ – ಹೆಣ್ಣಿನದು ಬಾಯಿಯಿಂದ, ಗಂಡಿನದು ಕಿವಿಯಿಂದ!

ಎಚ್.ಜಿ. ಜಗದೀಶ್, ಮೈಸೂರು

*ಪ್ರೇಮಿಗಳು ತುಟಿಗಳಿಗೇ ಮುದ್ದಿಸಬೇಕೆಂದು ಕಂಡುಹಿಡಿದವರು ಯಾರು?*

ಕೃಷ್ಣನ ತುಟಿಯನ್ನು ಮುದ್ದಿಸಿ 'ಅಧರಂ ಮಧುರಂ' ಎಂದು ಅಡ್ವರ್ಟೈಸ್‌ಮೆಂಟ್ ಕೊಟ್ಟ ಗೋಪಿಕಾ ಸ್ತ್ರೀ.

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ. ಹ. ಬಗಲಿ, ಜತ್ತ

*ಕಪ್ಪು ಬಣ್ಣವನ್ನು ಅಮಂಗಳ ಎನ್ನುತ್ತಿದ್ದರೂ ಕೆಲವು ಬೆಡಗಿಯರು ಕಪ್ಪು ಸೀರೆಯನ್ನೇ ಧರಿಸಲು ಹೆಚ್ಚು ಆಸೆ ಪಡುವುದೇಕೆ?*

ಬೆಳದಿಂಗಳ ಕಾಂತಿಗೆ ಕಪ್ಪನೆಯ ಮೋಡವೇ ಸರಿಯಾದ ಬ್ಯಾಕ್‌ಗ್ರೌಂಡ್.

ಕುಬೇರಪ್ಪ. ಎಂ. ವಿಭೂತಿ, ಹರಿಹರ

*ಸ್ತ್ರೀ ಹಣಕ್ಕಾಗಿ ಸಿನಿಮಾದಲ್ಲಿ ಅರೆನಗ್ನವಾಗಿ ನರ್ತಿಸಿದರೆ ಅದು ಶೋಷಣೆಯೋ ಅಥವಾ...?*

**show- ಶಾಣೆ!**

ಟಿ.ಆರ್. ರವೀಂದ್ರ, ಬೆಂಗಳೂರು

*ಕಾರ್ಯವಾಸಿ ಕತ್ತೆ ಕಾಲು ಕಟ್ಟು ಎನ್ನುತ್ತಾರೆ. ಕತ್ತೆಗೇ ಕಾರ್ಯವಾಗಬೇಕಾದರೆ ಯಾರ ಕಾಲು ಕಟ್ಟಬೇಕು?*

ಕತ್ತೆಗಿಂತ ಕೀಳಾದ ಪ್ರಾಣಿಯ ಕಾಲನ್ನು – ಈ ತರಹದವು ವಿಧಾನಸೌಧದಲ್ಲಿ ಬಹಳವೇ ಇವೆ.

ಮಲ್ಲನಗೌಡ. ಸಿ. ಪಾಟೀಲ, ರಂಭಾಪೂರ

*ಪ್ರಪಂಚದಲ್ಲಿ ಇಲ್ಲಿಯವರೆಗೆ ಉತ್ತರ ಸಿಗದೆ ಜಟಿಲವಾಗಿ ಉಳಿದಿರುವ ಪ್ರಶ್ನೆ ಯಾವುದು?*




'ಹೆಣ್ಣು ಯಾಕೆ ಹೀಗೆ?'

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಹಾಲಲ್ಲಾದರು ಹಾಕು, ನೀರಲ್ಲಾದರು ಹಾಕು ಎಂದರು ದಾಸರು. ಈಗ ಎಲ್ಲಿ ಹಾಕಬೇಕು?*

ಹಂಪಲ್ಲಾದರು ಹಾಕು ಹಳ್ಳಲ್ಲಾದರು ಹಾಕು ಪಾಲಿಕೇಂದ್ರ; ಹಂಪಲ್ಲಿ ಜಂಪಾಗಿ ಹಳ್ಳಲ್ಲಿ ಸ್ಲಂಪಾಗಿ ನರಳಾಡುತಿರುವೆ ಪಾಲಿಕೇಂದ್ರ...

ಆರ್. ಮಧುಸೂದನ್, ಹಾಸನ

*ವೈರಸ್‌ಗೆ ಕನ್ನಡದಲ್ಲಿ "ವಿಷಜಂತು' ಎನ್ನಬಹುದು. ಆಂಟಿ ವೈರಸ್‌ಗೆ?*

ಇಡೀ ಸಿಸ್ಟಂ ಅನ್ನು ತನ್ನ ಅಧೀನದಲ್ಲಿರಿಸಿಕೊಳ್ಳುವುದರಿಂದ – ವಶಜಂತು!

ಬಿ. ಚಂದ್ರೇಗೌಡ, ಬೆಂಗಳೂರು

*ದೇವರ ಮೇಲೆ ಭಾರ ಹಾಕೋದು ಯಾಕೆ?*

ತಲೆಯ ಮೇಲೆ ಚೌಕ ಹಾಕಿಕೊಂಡು ಕುಳಿತುಕೊಳ್ಳುವುದಕ್ಕಿಂತ ಅದು ವಾಸಿ ಆದ್ದರಿಂದ.

■ ರಾಮ್